353

ತಾರೀಖು 20ನೆ ಫೆಬ್ರವರಿ 1904.

ನಂ. ರೆ. 2474, ಡೆಪ್ಯೂಟಿ ಕಮಿಷನರಾದ ಮೆ|| ಎಂ. ಎಸ್. ನಾರಾಯಣರಾಯರು, 1904ನೆ ಫೆಬ್ರವರಿ 12ನೆ ತಾರೀಖಿನ ಪೂರ್ವಾಹ್ನದಲ್ಲಿ ತುಮಕೂರು ಡಿಸ್ಟ್ರಿಕ್ಟ್ ಮತ್ತು ಟ್ರೈಜರಿಯ ಚಾರ್ಜನ್ನು ಡೆಪ್ಯೂಟಿ ಕಮಿಷನರಾದ ಮೆ|| ಜೆ. ಪಿ. ಪುಟ್ಟಣ್ಣ ಚೆಟ್ಟಿಯವರಿಗೆ ಒಪ್ಪಿಸಿರುತ್ತಾರೆ.

ತಾರೀಖು 23ನೆ ಫೆಬ್ರವರಿ 1904.

ನಂ. ರೆ. 2495—ರೆ. ಫೈ. 112—1897-8, ಮೈಸೂರ ಸರ್ವಿಸ್ ರೆಗ್ಯುಲೇಷನ್‌ಗಳ 188ನೆ ಆರ್ಟಿಕಲ್ ಅನುಸರಿಸಿ ಚಿತ್ರದುರ್ಗ ಡಿಸ್ಟ್ರಿಕ್ಟಿನ ಅಸಿಸ್ಟೆಂಟ್ ಕಮಿಷನರಾದ ಮೆ|| ಎ. ಸುಬ್ರಹ್ಮಣ್ಯಯ್ಯ, ಬಿ. ಎ., ಯವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಾರಭ್ಯ ಎರಡು ತಿಂಗಳುಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತದೆ.

ತಾರೀಖು 23ನೆ ಫೆಬ್ರವರಿ 1904.

ನಂ. ರೆ. 2499—ರೆ. ಫೈ. 5—1903-4, ಮೈಸೂರ ಸರ್ವಿಸ್ ರೆಗ್ಯುಲೇಷನ್‌ಗಳ 188ನೆ ಆರ್ಟಿಕಲ್ ಅನುಸರಿಸಿ ಟಿಂಗಳೂರು ಡಿಸ್ಟ್ರಿಕ್ಟ್ ಟ್ರೈಜರಿ ಚಾರ್ಜಿನಲ್ಲಿರುವ ಪ್ರೊಬೇಷನೇರಿ ಅಸಿಸ್ಟೆಂಟ್ ಕಮಿಷನರಾದ ಮೆ|| ನರಸಿಂಗರಾವ್ ಪೂರ್ಣಯ್ಯ, ಬಿ. ಎ., ಯವರಿಗೆ 1904ನೆ ಫೆಬ್ರವರಿ 25ನೆ ತಾರೀಖು ಲಾಗಾಯಿತು ಅವರು ಉಪಯೋಗಿಸಿಕೊಳ್ಳುವ ಇತರ ತಾರೀಖಿನಾರಭ್ಯ 1 ತಿಂಗಳು, 11 ದಿನಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತದೆ.

ಹುಕುಂ ಬಮೋಜೀಬ್,
ಎಲ್. ಅನಂತಸ್ವಾಮಿರಾವ್,
ಜನರಲ್ ಮತ್ತು ರೆವಿನ್ಯೂ ಇಲಾಖೆಗಳ ಗವರ್ನ್‌ಮೆಂಟ್ ಆಫಿಷಿಯೇಟಿಂಗ್ ಸೆಕ್ರಿಟರಿ.

ಪಬ್ಲಿಕ್ ವರ್ಕ್ಸ್.

ಇಸ್ತಿಹಾರ್‌ನಾಮೆ.

ತಾರೀಖು 23ನೆ ಫೆಬ್ರವರಿ 1904.

ನಂ. 245—1322, ಹೆಸರುಘಟ್ಟ್ಟಾ ವಾಟರ್ ಸಪ್ಲೈ ಡಿವೀಜ್ ಆಫಿಷಿಯೇಟಿಂಗ್ ಎಗ್ಜಿಕ್ಯೂಟೀವ್ ಇಂಜಿನೀಯರ್ ಆದ ಮೆ|| ವಿ. ರಂಗಸ್ವಾಮಿ ಅಯ್ಯಂಗಾರ್, ಬಿ. ಸಿ. ಇ., ಯವರು ಮೂಹೆ ಮುಜಕೂರು ಗುರಿ ತಾರೀಖಿನಾರಭ್ಯ ಹೊಸದಾಗಿ ಏರ್ಪಾಡಾದ ವಾಟರ್ ಸಪ್ಲೈ ವ ಸ್ಯೂವರ್ಸ್ ಡಿವೀಜನಿನ ಚಾರ್ಜಿನಲ್ಲಿರಲಿಕ್ಕೆ ಖಾಯಂ 4ನೆ ಕ್ಲಾಸ್ ಎಗ್ಜಿಕ್ಯೂಟೀವ್ ಇಂಜನೀಯರಾಗಿ ಮೊಕರರ್ರಾಡಲ್ಪಟ್ಟಿರುತ್ತಾರೆ.

ಹಂಗಾಮಿಯಾಗಿರುವ ಹೆಸರುಘಟ್ಟ್ಟಾ ವಾಟರ್ ಸಪ್ಲೈ ಡಿವೀಜ್ ವಜಾ ಮಾಡಲ್ಪಟ್ಟಿರುತ್ತದೆ.

ಹುಕುಂ ಬಮೋಜೀಬ್,
ಡಬ್ಲ್ಯೂ. ಎಸ್. ಟ್ರೀಲ್, ಕ್ಯಾಪ್ಟನ್, ಆರ್. ಇ.,
ಪಬ್ಲಿಕ್ ವರ್ಕ್ಸ್ ಇಲಾಖಾ, ಮೈಸೂರು ಗವರ್ನ್‌ಮೆಂಟ್ ಅಂಡರ್ ಸೆಕ್ರಿಟರಿ.

ಮುಜರೈ.

ಇಸ್ತಿಹಾರ್‌ನಾಮೆ.

ತಾರೀಖು 23ನೆ ಫೆಬ್ರವರಿ 1904.

ನಂ. 2525—ಮುಜರೈ ಫೈ. 100-92, ಮಾನ್ಯಗಳೊಡನೆ ಮುಜರೈ ಇಲಾಖೆಯಲ್ಲಿ ಗವರ್ನ್‌ಮೆಂಟಿನವರ ಅಡಳಿತದಲ್ಲಿ ತೆಗೆದುಕೊಳ್ಳಲ್ಪಟ್ಟ ಮೈಸೂರು ಪಟ್ಟಣದಲ್ಲಿ ವಾಜಿ ವೆ|| ಬಕ್ಷಿ ನರಸಪ್ಪನವರಿಂದ ಕಟ್ಟಲ್ಪಟ್ಟ ಶ್ರೀ ಸುಬ್ರಹ್ಮಣ್ಯೇಶ್ವರ ಸ್ವಾಮಿಯ ದೇವಸ್ಥಾನ ಮತ್ತು ಛತ್ರದ ಕೆಲಸಗಳನ್ನು ಮೇಲ್ವಿಚಾರಣೆ ನೋಡುವ ಬಗ್ಗೆ ಇದರಡೀ ಕಂಡ ದೊಡ್ಡವನುಷ್ಯರು ಧರ್ಮದರ್ಶಿಗಳಾಗಿ ಮೊಕರರ್ರಾಡಲ್ಪಟ್ಟಿರುತ್ತಾರೆ :—

ಮೆ|| ರಾ|| ರಾ|| ಶಾಮಂಣ ಉರಫ್ ಶಾಮರಾಯರು.
,, ಸಿ. ವೆಂಕಟರಾವ್, ಬಿ. ಎ., ಯವರು, ಅಸಿಸ್ಟೆಂಟ್ ಕಮಿಷನರು.
,, ವೆಂಕಟ ಕೃಷ್ಣಯ್ಯನವರು, ಮೈಸೂರಲ್ಲಿರುವ ಮರಿಮಲ್ಲಪ್ಪನವರ ಪಾಠಶಾಲೆಯ ಹೆಡ್ ಮಾಸ್ಟರು.
ಮೈಸೂರಲ್ಲಿರುವ ತತ್ಕಾಲದ ಮೈಸೂರು ಪಟ್ಟಣ ಮ್ಯುನಿಸಿಪಲಿಟಿಯ ವೈಸ್ ಪ್ರೆಸಿಡೆಂಟರು.

ಹುಕುಂ ಬಮೋಜೀಬ್,
ಎಲ್. ಅನಂತಸ್ವಾಮಿ ರಾವ್,
ಮುಜರೈ ಇಲಾಖೆಯ ಡೆಪ್ಯೂಟಿ ಸೆಕ್ರಿಟರಿ.